ಅತ್ಯದ್ಭುತವಾಗಿ ಕಟ್ಟಿಕೊಡುವ ಕಾದಂಬರಿ. 'ಸುಧಾ' ವಾರಪತ್ರಿಕೆ ನಡೆಸಿದ ಯುಗಾದಿ ಕಾದಂಬರಿ ಸ್ಪರ್ಧೆಯಲ್ಲಿ 'ಶೋಧನೆ' ಪ್ರಥಮ ಬಹುಮಾನ ಗಳಿಸಿತ್ತು.

'ಧರ್ಮಕಾರಣ' ಪಿವಿಎನ್ ಅವರ ಒಂಬತ್ತನೆಯ ಕಾದಂಬರಿ. ಕಲ್ಯಾಣದ ಕ್ರಾಂತಿಯೆಂದೇ ಹೆಸರಾದ ಹನ್ನೆರಡನೇ ಶತಮಾನದ ಸಮಾಜೋ-ಧಾರ್ಮಿಕ ಚಳವಳಿಯಾದ ವಚನ ಚಳವಳಿಯನ್ನು ಆಧರಿಸಿ ಕನ್ನಡದಲ್ಲಿ ಇದುವರೆಗೆ ಹಲವಾರು ಕಾದಂಬರಿ, ನಾಟಕಗಳು ಬಂದಿವೆ. ಮೊದಲಿನಿಂದಲೂ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಅಧ್ಯಯನ ಮತ್ತು ಬರಹಗಳಿಗೆ ತಮ್ಮನ್ನು ಅರ್ಪಿಸಿಕೊಂಡ ರೀತಿಯಲ್ಲಿ ಕೆಲಸ ಮಾಡಿದ ಪಿ.ವಿ. ನಾರಾಯಣ ಅವರ 'ಧರ್ಮಕಾರಣ' ಕಾದಂಬರಿಯ ವಸ್ತು ಕೂಡ ಕನ್ನಡಿಗರು ಎಂದೂ ಮರೆಯಲಾಗದ ಅದೇ ಪರ್ವಕಾಲಕ್ಕೆ ಸಂಬಂಧಿಸಿದ್ದು. ಬಸವಣ್ಣನ ಜೀವನಗಾಥೆಯನ್ನು ಅವನ ನೆನಪುಗಳ ಮೂಲಕವೇ ಚಿತ್ರಿಸುತ್ತ, ಅವನ ಮನಸ್ಸಿನ ಸಂಘರ್ಷಗಳು, ದ್ವಂದ್ವಗಳು, ತಾಕಲಾಟಗಳನ್ನು, ಹಾಗೂ ವಚನ ಚಳವಳಿಯ ಶಕ್ತಿ ಮತ್ತು ಮಿತಿಗಳನ್ನು ಒಟ್ಟೊಟ್ಟಿಗೇ ನಮ್ಮ ಮುಂದೆ ಈ ಕಾದಂಬರಿ ಪ್ರಸ್ತುತ ಪಡಿಸುತ್ತದೆ. ಈ ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

ವಚನ ಚಳವಳಿಯ ಕಾಲಘಟ್ಟದ ಕೆಲವು ಸಂಗತಿಗಳು ಇದಮಿತ್ಥಂ ಎಂದು ನಿರ್ಧರಿತವಾಗಿಬಿಟ್ಟಿವೆ ಎಂದು ಈಗಲೂ ಹೇಳುವಂತಿಲ್ಲ. ಇತಿಹಾಸಕ್ಕೆ ಸಂಬಂಧಿಸಿದಂತೆ ಕಾದಂಬರಿ, ನಾಟಕಗಳನ್ನು ರಚಿಸುವ ಯಾವುದೇ ಲೇಖಕ ಲಭ್ಯವಿರುವ ಐತಿಹಾಸಿಕ ವಸ್ತು ಸಂಗತಿಗಳು ಮತ್ತು ಕಲ್ಪನೆಯನ್ನು ಆಧರಿಸಿಯೇ ಕೃತಿ ರಚಿಸಬೇಕಾಗುತ್ತದೆಂಬುದು ಎಲ್ಲರಿಗೂ ಗೊತ್ತಿರುವಂಥದೇ ಮತ್ತು ಕನ್ನಡವನ್ನೂ ಒಳಗೊಂಡಂತೆ ಎಲ್ಲ ಭಾಷೆ ಸಾಹಿತ್ಯಗಳ ಸಂದರ್ಭಕ್ಕೂ ಇದು ಅನ್ವಯಿಸುತ್ತದೆ. 'ಧರ್ಮಕಾರಣ'ದಲ್ಲಿ ನಾರಾಯಣರು, ಬಸವಣ್ಣನವರು ಬಾಗೇವಾಡಿಯ ತಮ್ಮ ತಂದೆಯ ಮನೆಯನ್ನು ಬಿಟ್ಟುಹೊರಡಲು ಕಾರಣವಾದ ಸಂದರ್ಭ ಏನಿರಬಹುದೆಂಬುದಕ್ಕೆ ಸಂಬಂಧಿಸಿದಂತೆ ಖಚಿತ ಐತಿಹಾಸಿಕ ದಾಖಲೆಗಳು ಇಲ್ಲದೆ ಇರುವ ಕಾರಣ ಒಬ್ಬ ಸೃಜನಶೀಲ ಲೇಖಕನಿಗಿರುವ ಸ್ವಾತಂತ್ರ್ಯವನ್ನು ಬಳಸಿಕೊಂಡು ಆ ಸಂದರ್ಭವನ್ನು ಕಲ್ಪಿಸಿರುವುದನ್ನು ಸಾಹಿತ್ಯೇತರ ಕಾರಣಗಳಿಗಾಗಿ ಕೆಲವರು ಬಲವಾಗಿ ಪ್ರತಿಭಟಿಸಿದ್ದರು. ಆ ವಿವಾದದಿಂದ ಲೇಖಕರು ಅಕಾಡೆಮಿ ಪ್ರಶಸ್ತಿಯನ್ನು ತಿರಸ್ಕರಿಸಿದರು. ನಾನು ಬಿಟ್ಟುಕೊಟ್ಟಿರುವುದು ಪ್ರಶಸ್ತಿಯನ್ನು ಮಾತ್ರವೇ ಹೊರತು ನನ್ನ ಅಭಿಪ್ರಾಯವನ್ನಲ್ಲ ಎಂದು ತಮ್ಮ ನಿಲುವಿಗೆ ಬದ್ಧತೆ ತೋರಿದರು. ಕೆಲವೊಂದು ಪಟ್ಟಭದ್ರರ ಒತ್ತಡಕ್ಕೆ ಮಣಿದ ರಾಜ್ಯ ಸರ್ಕಾರ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಆದೇಶ ಜಾರಿಮಾಡಿತು. ಆ ತೀರ್ಮಾನದ ವಿರುದ್ಧ ಕೆಲವು ಲೇಖಕರು ಮತ್ತು ಸ್ವಯಂ ಪಿವಿಎನ್ ಹೈಕೋರ್ಟಿನಲ್ಲಿ ಮೊಕದ್ದಮೆ ಹೂಡಿದರು. ಕೆಲವರು ಆಕ್ಷೇಪಿಸಿದ ಭಾಗಗಳನ್ನು ಕೈಬಿಟ್ಟರೆ ಮುಟ್ಟುಗೋಲು ಆದೇಶ ವಾಪಸ್ ಪಡೆಯುವುದಾಗಿ ಸರ್ಕಾರ ಹೇಳಿತು. ಕೋರ್ಟು ಪಿವಿಎನ್ ಅಭಿಪ್ರಾಯ ಕೇಳಿದಾಗ, ಲೇಖಕರು ಪರಿಷ್ಕಾರಕ್ಕೆ ಒಪ್ಪದೆ ಇದ್ದದ್ದರಿಂದ ವಿಪರ್ಯಾಸವೆಂಬಂತೆ ಕಾದಂಬರಿ ಕೆಲವರ ಮನಸ್ಸಿಗೆ ನೋವುಂಟು ಮಾಡುವ ಕಾರಣ ಅದನ್ನು ಲೇಖಕ ದುರುದ್ದೇಶದಿಂದ ರಚಿಸಿದ್ದಾನೆಂಬ ತೀರ್ಮಾನಕ್ಕೆ ಬರಬೇಕಾಗಿದೆಯೆಂದು ಹೇಳಿ ಕೋರ್ಟು ಮುಟ್ಟುಗೋಲು ಆದೇಶವನ್ನು ಎತ್ತಿಹಿಡಿಯಿತು. ಅದರ ನಂತರದಲ್ಲಿ ಬೇಸರದಿಂದಲೋ ಏನೋ ನಾರಾಯಣ ಅವರು ಕಾದಂಬರಿ ಬರವಣಿಗೆಯನ್ನೇ ಸ್ಥಗಿತಗೊಳಿಸಿ, ಸಂಶೋಧನೆ, ವಿಮರ್ಶೆಗಳಿಗೇ ತಮ್ಮೆಲ್ಲ ಸಮಯ ಮೀಸಲಿಟ್ಟಂತೆ ತೋರುತ್ತದೆ.

ನಾರಾಯಣ ಅವರ ಕಾದಂಬರಿಗಳ ಸೋಲು ಗೆಲುವುಗಳು ಏನೇ ಇರಲಿ, ಅವರ ಕಾದಂಬರಿಗಳ ಬಗ್ಗೆ ಒಟ್ಟಾರೆ ಹೇಳಬಹುದಾದ್ದೆಂದರೆ - ಅವೆಲ್ಲವೂ ಅತ್ಯಂತ ಹೃದ್ಯವಾದ ಗದ್ಯದಲ್ಲಿದ್ದು ಸಲೀಸಾಗಿ ಓದಿಸಿಕೊಂಡು ಹೋಗುವ ಗುಣವನ್ನು ಹೊಂದಿವೆ. ಲವಲವಿಕೆಯ ಮತ್ತು ಚುರುಕಾದ ತಿಳಿಹಾಸ್ಯದ ಸಂಭಾಷಣೆಗಳಿಂದ ಕೂಡಿರುವ ಕಾದಂಬರಿಗಳಾಗಿವೆ. ಸಾಹಿತ್ಯದ ಪ್ರಕಾರಗಳಲ್ಲೆಲ್ಲ ಕಾದಂಬರಿಯ ಒಡಲು ಬರಹಗಾರನಿಗೆ ಅಗತ್ಯವಾದ್ದು, ಅನಗತ್ಯವಾದ್ದು ಏನೆಲ್ಲವನ್ನು ಹೇಳುವ ಅವಕಾಶವನ್ನು ಮಿಗಿಲಾಗಿಯೇ ದೊರಕಿಸಿಕೊಡುತ್ತದೆಂಬುದು ನಿಜವಾದರೂ, ನಾರಾಯಣ ಅವರ ಕಾದಂಬರಿಗಳಲ್ಲಿ ಕಾದಂಬರಿಯ